ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೫೯ Volume 159	ಬೆಳಗಾವಿ, ಗುರುವಾರ, ಸೆಪ್ಟೆಂಬರ್ ೦೫, ೨೦೨೪ (ಭಾದ್ರಪದ ಮಾಸ ೧೪, ಶಕ ವರ್ಷ ೧೯೪೬) Belagavi, Thursday, September 05, 2024 (Bhadrapada Masa 14, ShakaVarsha 1946)	ಸಂಚಿಕೆ–೪೪ Issue-44

ಭಾಗ ೬ಬಿ

ಬೆಳಗಾವಿ ವಿಭಾಗಕ್ಕೆ ಮತ್ತುಧಾರವಾಡ, ಹಾವೇರಿ, ಗದಗ, ಬೆಳಗಾವಿ, ವಿಜಯಪುರ, ಬಾಗಲಕೋಟೆ ಮತ್ತುಉತ್ತರ ಕನ್ನಡ ಜಿಲ್ಲೆಗಳಿಗೆ ಸ್ಥಳೀಯವಾಗಿ ಅನ್ವಯವಾಗುವ ಅಧಿಸೂಚನೆಗಳು ಮತ್ತು ಆದೇಶಗಳು ಶಾಸನಬದ್ಧವಲ್ಲದಆದರೆ ಜಮೀನು ಸಂಗ್ರಹಣ ಶಾಸನದ ಮೇರೆಗೆ ಹೊರಡಿಸಿದ ಅಧಿಸೂಚನೆಗಳ ಸಹಿತವಾಗಿ ಸರ್ಕಾರದ ಅಧಿಸೂಚನೆಗಳು

ಕರ್ನಾಟಕ ಸರ್ಕಾರ
GOVT OF KARNATAKA

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಧಾರವಾಡ ಜಿಲ್ಲೆ, ಧಾರವಾಡ–580001

OFFICE OF THE DEPUTY COMMISSIONER, DHARWAD DISTRICT, DHARAWAD-580 001

ಸಂಖ್ಯೆ:ಡಿಯುಡಿಸಿ/ಕೊ.ಪ್ರ/ಸಿದ್ಧಾರ್ಥ ಕಾಲೋನಿ/ವಹಿ/2023-24/611 ದಿನಾಂಕ:02.09.2024

ಅಂತಿಮ ಅಧಿಸೂಚನೆ

(ಕರ್ನಾಟಕ ಕೊಳಚೆ ಪ್ರದೇಶಗಳು(ಅಭಿವೃದ್ಧಿ ಮತ್ತು ನಿರ್ಮೂಲನೆ) ಅಧಿನಿಯಮ 1973 ಸೆಕ್ಷನ್-3 ರನ್ವಯ)

ಧಾರವಾಡ ಜಿಲ್ಲೆಯ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಹುಬ್ಬಳ್ಳಿ ನಗರ ತಾಲೂಕಿನ ಅಯೋಧ್ಯಾ ಗ್ರಾಮದ ಸಿದ್ಧಾರ್ಥ ಕಾಲೋನಿ ಪ್ರದೇಶವು ಕಮೀಶನರ್ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಮಾಲಿಕತ್ವದಲ್ಲಿರುತ್ತದೆ. ಸಿ.ಟಿ.ಎಸ್.ನಂ:70ಎ ರಲ್ಲಿ 1517.56 ಚಮೀ ವಿಸ್ತೀರ್ಣ ಜಮೀನಿನಲ್ಲಿ 213 ಕುಟುಂಬಗಳು ವಾಸವಾಗಿದ್ದು 1022 ಜನಸಂಖ್ಯೆಯಿಂದ ಕೂಡಿರುತ್ತದೆ. ಈ ನಿವಾಸಿಗಳು ಸುಮಾರು 35 ವರ್ಷಗಳಿಂದ ಇಲ್ಲಿಯೇ ವಾಸವಾಗಿದ್ದಾರೆ. ಈ ಪ್ರದೇಶದಲ್ಲಿ ಹಂಚಿನ ಮನೆಗಳು, ಗುಡಿಸಲುಗಳು ಇರುತ್ತವೆ. ಮೂಲಭೂತ ಸೌಕರ್ಯಗಳಾದ ಬೀದಿ ದೀಪ, ಚರಂಡಿ ಸಾರ್ವಜನಿಕ ಶೌಚಾಲಯ, ಕುಡಿಯುವ ನೀರು ಇತ್ಯಾದಿ ಮೂಲಭೂತ ಸೌಲಭ್ಯಗಳು ಇರುವುದಿಲ್ಲ. ಈ ಜಾಗವು ಅನಾರೋಗ್ಯ ವಾತಾವರಣದಿಂದ ಕೂಡಿದ್ದು, ಈ ಪ್ರದೇಶವು ಕೊಳಗೇರಿ ಪ್ರದೇಶವೆಂದು ಘೋಷಿಸಲು ಎಲ್ಲಾ ಗುಣ ಲಕ್ಷಣಗಳನ್ನು ಹೊಂದಿದ್ದು, ಸದರಿ ಪ್ರದೇಶವನ್ನು ಮಂಡಳಿಯ ಕಾಯ್ದೆ 1973ರ ಕಲಂ 3ರಡಿ ಕೊಳಚೆ ಪ್ರದೇಶವೆಂದು ಘೋಷಣೆ ಮಾಡುವ ಕುರಿತು ಆಯುಕ್ತರು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಬೆಂಗಳೂರು ರವರು ತಮ್ಮ ಪತ್ರದ ಸಂಖ್ಯೆ: ಕಕೊಅಮ/ಕಂದಾಯ/38/2023-24/432 ದಿನಾಂಕ:05.12.2023 ರಲ್ಲಿ ಸದರಿ ಸ್ಥಳವನ್ನು ಕೊಳಚೆ ಪ್ರದೇಶವೆಂದು ಘೋಷಿಸಲು ಶಿಫಾರಸ್ಸಿನೊಂದಿಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

(೬ಬಿ೩೪೪)

ಆಯುಕ್ತರು, ಹುಬ್ಬಳ್ಳಿ-ಧಾರವಾಡ ವiಹಾನಗರ ಪಾಲಿಕೆ, ಹುಬ್ಬಳ್ಳಿ ಇವರು ಸದರಿ ಪ್ರದೇಶ ಕೊಳಚೆ ಪ್ರದೇಶದ ಲಕ್ಷಣಗಳನ್ನು ಹೊಂದಿದೆ ಮತ್ತು ಕರ್ನಾಟಕ ಕೊಳಚೆ ನಿಮೂರ್ಲನಾ ಕಾಯ್ದೆ-1973 ನೆದ್ವರನ್ವಯ ಕೊಳಚೆ ಪ್ರದೇಶವೆಂದು ಘೊಷಿಸುವ ಬಗ್ಗೆ ನಿರಾಕ್ಷೇಪಣಾ ಪತ್ರ ನೀಡಿರುತ್ತಾರೆ.

1)ಆಯುಕ್ತರು, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಹುಬ್ಬಳ್ಳಿ, 2) ಉಪ ವಿಭಾಗಾಧಿಕಾರಿಗಳು, ಧಾರವಾಡ 3)ತಹಶೀಲ್ದಾರರು, ಹುಬ್ಬಳ್ಳಿ ನಗರ 4) ಸುಪರಿಟೆಂಡಂಟ್ ಇಂಜಿನೀಯರ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ 5)ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಧಾರವಾಡ 6) ಭೂ ದಾಖಲೆಗಳ ಸಹಾಯಕ ನಿರ್ದೇಶಕರು ಹುಬ್ಬಳ್ಳಿ ಆಧಿಕಾರಿಗಳ ಜಂಟಿ ಪರಿಶೀಲನಾ ತಂಡ ಸದರಿ ಪ್ರದೇಶಕ್ಕೆ ಭೇಟಿ ನೀಡಿ, ಜಂಟಿ ಪರಿಶೀಲನಾ ವರದಿಯನ್ನು ಸಲ್ಲಿಸಿದ್ದು, ಸದರಿ ಅಧಿಕಾರಿಗಳ ಸ್ಥಳ ತಪಾಸಣೆ ವಿಚಾರಣಾ ವರದಿ ಮತ್ತು ದಾಖಲಾತಿಗಳ ಪರಿಶೀಲನೆಯಿಂದ ಸದರಿ ಪ್ರದೇಶವನ್ನು ಮಂಡಳಿಯ ಕಾಯ್ದೆ 1973ರ ಕಲಂ 3ರಡಿ ಕೊಳಚೆ ಪ್ರದೇಶವೆಂದು ಘೋಷಿಸುವುದು ಸೂಕ್ತವೆಂದು ತಿಳಿಸಿರುತ್ತಾರೆ.

ಸರ್ಕಾರದ ಅಧಿಸೂಚನೆ ಸಂಖ್ಯೆ:ವಇ73ಎಸ್‌ಬಿಎಂ 2001 ದಿನಾಂಕ:26/06/2002 ರಲ್ಲಿ ಕರ್ನಾಟಕ ಕೊಳಚೆ ಪ್ರದೇಶ (ಅಭಿವೃದ್ಧಿ ಮತ್ತು ನಿರ್ಮೂಲನಾ) ಕಾಯ್ದೆ 1973 ರ ಕಲಂ 3 ರನ್ವಯ ಕೊಳಚೆ ಪ್ರದೇಶಗಳನ್ನು "ಕೊಳಚೆ ಪ್ರದೇಶ" ವೆಂದು ಘೋಷಿಸುವ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ನೀಡಲಾಗಿರುತ್ತದೆ. ಕಾರಣ ಪ್ರದತ್ತವಾದ ಅಧಿಕಾರದನ್ವಯ ಪ್ರಾಥಮಿಕ ಅಧಿಸೂಚನೆಯನ್ನು ಸಂಖ್ಯೆ:ಡಿಯುಡಿಸಿ./ಕೊ.ಪ್ರ/ಸಿದ್ಧಾರ್ಥ ಕಾಲೋನಿ ವಹಿ/2023-24/1080, ದಿನಾಂಕ:12-01-2024 ರಂತೆ ಕರ್ನಾಟಕ ರಾಜ್ಯ ಪತ್ರ ಭಾಗ 6ಬಿ ರಲ್ಲಿ ದಿನಾಂಕ 28-02-2024 ರಂದು ಹೊರಡಿಸಿ ಸಂಭಂಧಿಸಿದವರಿಂದ ಸದರಿ ಅಧಿಸೂಚನೆ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾದ 30 ದಿನಗಳೊಳಗಾಗಿ ಆಕ್ಷೇಪಣೆಯನ್ನು ಆಹ್ವಾನಿಸಲಾಗಿರುತ್ತದೆ.

ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ಧಾರವಾಡ ಇವರ ದಿನಾಂಕ: 11-06-2024 ರ ಪತ್ರದಲ್ಲಿ ಸದರಿ ಪ್ರದೇಶವನ್ನು ಕೊಳಚೆ ಪ್ರದೇಶವೆಂದು ಘೋಷಿಸಲು ಹೊರಡಿಸಿರುವ ಪ್ರಾಥಮಿಕ ಅಧಿಸೂಚನೆ ಕುರಿತು ತಮ್ಮ ಕಾರ್ಯಾಲಯಕ್ಕೆ ಯಾವುದೇ ಸಾರ್ವಜನಿಕ ಹಿತಾಸಕ್ತಿ/ಆಕ್ಷೇಪಣೆ ಸ್ವೀಕೃತವಾಗಿಲ್ಲವೆಂದು ಮತ್ತು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಉಪ ವಿಭಾಗಾಧಿಕಾರಿಗಳ ಕಾರ್ಯಾಲಯ-ಧಾರವಾಡ, ತಹಶೀಲ್ದಾರ್ ಕಚೇರಿ-ಹುಬ್ಬಳ್ಳಿ ನಗರ ಮತ್ತು ಗ್ರಾಮೀಣ, ತಹಶೀಲ್ದಾರ್ ಕಚೇರಿ-ಧಾರವಾಡ ರವರ ಕಚೇರಿಗಳಿಂದ ವರದಿ ಪಡೆದು, ಅಲ್ಲಿಯೂ ಯಾವುದೇ ಹಿತಾಸಕ್ತಿ/ಆಕ್ಷೇಪಣೆ ಸ್ವೀಕೃತವಾಗದಿರುವ ಬಗ್ಗೆ ಕ್ರೋಡೀಕೃತ ವರದಿ ಸಲ್ಲಿಸಿ ಸದರಿ ಪ್ರದೇಶವನ್ನು ಕೊಳಚೆ ಪ್ರದೇಶವೆಂದು ಘೋಷಿಸಬಹುದಾಗಿರುತ್ತದೆ ಎಂದು ವರದಿ ನೀಡಿರುತ್ತಾರೆ.

ಸದರಿ ಪ್ರದೇಶಕ್ಕೆ ಸಂಬಂಧಿಸಿದಂತೆ, ಆಯುಕ್ತರು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಬೆಂಗಳೂರು ರವರ ಪ್ರಸ್ತಾವನೆಯಂತೆ ಸಿ.ಟಿ.ಎಸ್.ನಂ 70 ಎ ಕ್ಷೇತ್ರ 1517.56 ಚ.ಮೀ ಯನ್ನು ಕೊಳಚೆ ಪ್ರದೇಶವೆಂದು ಘೋಷಿಸಲು ಈಗಾಗಲೇ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಭೂ-ದಾಖಲೆಗಳು ಸಹಾಯಕ ನಿರ್ದೇಶಕರು, ನಗರ ಮಾಪನ ಕಚೇರಿ, ಹುಬ್ಬಳ್ಳಿ ಇವರು ಸದರಿ ಸಿ.ಟಿ.ಎಸ್.ನಂ 70 ಎ ಕ್ಷೇತ್ರ 1517.56 ಚ.ಮೀ ಪ್ರದೇಶದಲ್ಲಿ 130 ಚ.ಮೀ ಕ್ಷೇತ್ರವು ಉಪವಿಭಾಗವಾಗಿ ಸಿ.ಟಿ.ಎಸ್.ನಂ 70 ಬಿ ಎಂದು ದಾಖಲಾಗಿದ್ದು ಈ ಉಪವಿಭಾಗದಿಂದ ಮೂಲ ಆಸ್ತಿ ಸಿ.ಟಿ.ಎಸ್.ನಂ 70 ಎ ಕ್ಷೇತ್ರ 1387.57 ಚ.ಮೀ ಆಗಿರುತ್ತದೆ ಎಂದು ದೃಢೀಕರಣ ಮತ್ತು ಮಾಹಿತಿ ಸಲ್ಲಿಸಿರುತ್ತಾರೆ.

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಷೆಡ್ಯೂಲಿನಲ್ಲಿ ನಮೂದಿಸಿರುವ ಪ್ರದೇಶವು ಕರ್ನಾಟಕ ಕೊಳಚೆ ಪ್ರದೇಶಗಳು (ಅಭಿವೃದ್ಧಿ ಮತ್ತು ನಿರ್ಮೂಲನೆ) ಅಧಿನಿಯಮ 1973 ಸೆಕ್ಷನ್-3 ರನ್ವಯ ಕೊಳಚೆ ಪ್ರದೇಶವೆಂದು ಘೋಷಿಸಲು ಎಲ್ಲ ರೀತಿಯಿಂದ ಅರ್ಹವಾಗಿರುತ್ತದೆ ಎಂದು ಕಾರ್ಯಪಾಲಕ ಅಭಿಯಂತರರು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಧಾರವಾಡ ಹಾಗೂ ದಿನಾಂಕ 23-08-2024 ರ ಪತ್ರದಲ್ಲಿ

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

ಆಯುಕ್ತರು, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಹುಬ್ಬಳ್ಳಿ ರವರುಗಳು ಅನುಬಂಧ ಎ ಮತ್ತು ಬಿ ರಲ್ಲಿ ವರದಿ ಮತ್ತು ದೃಢೀಕರಣ ಪತ್ರ ಹಾಗೂ ನಿರಾಕ್ಷೇಪಣಾ ಪತ್ರ ಸಲ್ಲಿಸಿರುತ್ತಾರೆ.

ಆದ್ದರಿಂದ, ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಧಾರವಾಡ ಹಾಗೂ ಆಯುಕ್ತರು, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಹುಬ್ಬಳ್ಳಿ ರವರುಗಳು ಸಲ್ಲಿಸಿದ ಅನುಬಂಧ ಎ ಮತ್ತು ಬಿ ರಲ್ಲಿನ ವರದಿ ಮತ್ತು ದೃಢೀಕರಣ ಪತ್ರ ಹಾಗೂ ನಿರಾಕ್ಷೇಪಣಾ ಪತ್ರಗಳನ್ನು ಆಧರಿಸಿ, ಸರ್ಕಾರದ ಅಧಿಸೂಚನೆ ಸಂಖ್ಯೆ :ವ.ಇ.73 ಎಸ್.ಬಿ.ಎಂ 2001 ದಿನಾಂಕ 26-06-2002 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಈ ಕೆಳಕಂಡ ಷೆಡ್ಯೂಲನಲ್ಲಿನ ಪ್ರದೇಶವನ್ನು ಕರ್ನಾಟಕ ಕೊಳಚೆ ಪ್ರದೇಶಗಳು (ಅಭಿವೃದ್ಧಿ ಮತ್ತು ನಿರ್ಮೂಲನೆ) ಅಧಿನಿಯಮ 1973 ಸೆಕ್ಷನ್-3 ರನ್ವಯ ಅಂತಿಮವಾಗಿ ಕೊಳಚೆ ಪ್ರದೇಶವೆಂದು ಈ ಮೂಲಕ ಘೋಷಿಸಿದೆ.

ಅನುಸೂಚಿ

ಅ. ನಂ	ಕೊಳಚೆ ಪ್ರದೇಶದ ಹೆಸರು	ಮಾಲೀಕರ ಹೆಸರು	ಗ್ರಾಮ	ಸಿ.ಟಿ.ಎಸ್ ನಂ	ಅಂದಾಜು ವಿಸ್ತೀರ್ಣ ಎ-ಗುಂ/ ಚ.ಮೀ	ಮೇರೆಗಳು
01	ಸಿಧ್ಧಾರ್ಥ ಕಾಲೋನಿ	ಕಮೀಶನರ್ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ	ಅಯೋಧ್ಯಾ	70 ಎ	1387.57 ಚಮೀ	ಪೂರ್ವ : ಸಿ.ಟಿ.ಎಸ್.ನಂ 72 ಪಶ್ಚಿಮ : ಸಿ.ಟಿ.ಎಸ್.ನಂ 69 ಎ ಉತ್ತರ : ಸಿ.ಟಿ.ಎಸ್.ನಂ 69 ಬ ದಕ್ಷಿಣ : ರಾಜ ಕಾಲುವೆ (ಸಿಟಿಎಸ್.ನಂ 70-ಬಿ ಕ್ಷೇತ್ರ- 130 ಚ.ಮೀ ಹೊರತುಪಡಿಸಿ)

ಜಿಲ್ಲಾಧಿಕಾರಿಗಳು, ಧಾರವಾಡ

PR – 449

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಸರ್ಕಾರಿ ವಿಭಾಗೀಯ ಮುದ್ರಣಾಲಯ, ಧಾರವಾಡ.

SOMASHEKAR B E